ಪ್ರಾರಂಭ ಮಾಡಿದ್ದಾರೆ. ಇಡೀ ಬಾದಾಮಿ, ಬಾಗಲಕೋಟೆ, ಕೊಪ್ಪಳ ಡಿವಿಜನ್‌ನಲ್ಲಿ ಬರತಕ್ಕಂಥ ಎಲ್ಲಾ ಜಾಗಳನ್ನು ತುಂಬಲು ಕ್ರಮ ಕೈಗೊಳ್ಳುತ್ತೇವೆ.

ಅಧ್ಯಕ್ಷರು: ಜಯರಾಮಶೆಟ್ಟಿಯವರೆ, ನಿಮ್ಮ ಪ್ರಶ್ನೆಗೆ ಸರ್ಕಾರ ಸ್ವಲ್ಪ ಸಮಯ ಕೇಳಿದ್ದಾರೆ. ನೆಕ್ಸ್ಟ್, ಅವರ ಪ್ರಶ್ನೆ ಇದ್ದಾಗ ಕಳುಹಿಸಿಕೊಡುತ್ತೇನೆ.

ಮಾಗಡಿ ತಾಲ್ಲೂಕಿನಲ್ಲಿ ಎ.ಪಿ.ಎಂ.ಸಿ. ಯಾರ್ಡ್ ನಿರ್ಮಾಣ

50(101) **ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ):** ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ತಾಲ್ಲೂಕಿನಲ್ಲಿ ಎಪಿಎಂಸಿ ಯಾಡ್ ಇಲ್ಲದೆ ಇರುವುದರಿಂದ ರೈತರಿಗೆ ಭಾರೀ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಮಾಗಡಿ ತಾಲ್ಲೂಕಿನಲ್ಲಿ ಎಪಿಎಂಸಿ ಯಾಡ್ ನಿರ್ಮಿಸುವ ಯೋಜನೆಯೇನಾದರೂ ಸರ್ಕಾರದವರ ಮುಂದೆ ಇದೆಯೇ;

ಇ) ಹಾಗಿದ್ದಲ್ಲಿ ಯಾವಾಗ ನಿರ್ಮಿಸಲಾಗುವುದು, ಹಾಗೂ ಯಾವ ಪ್ರದೇಶದಲ್ಲಿ ನಿರ್ಮಿಸಲಾಗುವುದು?

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು)

ಅ) ಹೌದು

ಆ) ಹೌದು

ಇ) ಮಾಗಡಿಯಲ್ಲಿ ಮಾರುಕಟ್ಟೆ ಪ್ರಾಂಗಣವನ್ನು ನಿರ್ಮಿಸಲು ಜಮೀನನ್ನು ಗುರ್ತಿಸುವ ಕ್ರಮ ಜರುಗಿಸಲಾಗಿದೆ. ಸರ್ಕಾರಿ ಜಮೀನು ಇನ್ನೂ ಲಭ್ಯವಿರುವುದಿಲ್ಲ. ಜಮೀನನ್ನು ವಶಪಡಿಸಿಕೊಂಡ ಕೂಡಲೇ ಪ್ರಾಂಗಣದ ನಿರ್ಮಾಣಕ್ಕೆ ಸೂಕ್ತ ಕ್ರಮ ಜರುಗಿಸಲಾಗುವುದು.

ಶ್ರೀ ಹೆಚ್.ಸಿ. ಬಾಲಕೃಷ್ಣ: ನನ್ನ ಕ್ಷೇತ್ರದಲ್ಲಿ ಎಪಿಎಂಸಿ ಯಾರ್ಡ್ ಮಾಡುವುದರ ಬಗ್ಗೆ ಇನ್ನೂ ಜಾಗ ದೊರೆತಿಲ್ಲ, ಮಾಡುತ್ತೇವೆಂದು ಹೇಳಿದ್ದಾರೆ. ತಾವು ಏನಾದರೂ ಜಾಗದ ವಿಚಾರದಲ್ಲಿ ಮುನಿಸಿಪಾಲಿಟಿಯವರಿಗೆ ಪತ್ರ ಬರೆದಿದ್ದೀರಾ? ಯಾವಾಗ ಬರೆದಿದ್ದೀರಾ? ನಮ್ಮ ಗಮನಕ್ಕೆ ಬಂದರೆ ಸ್ವಲ್ಪ ಜಾಗವನ್ನು ಕೊಡಿಸುವ ವ್ಯವಸ್ಥೆ ಮಾಡುತ್ತೇವೆ. ಜಾಗವನ್ನು ಕೊಟ್ಟ ನಂತರ ಎಷ್ಟು ದಿನಗಳಲ್ಲಿ ಪ್ರಾರಂಭ ಮಾಡುತ್ತೀರಿ?

ಶ್ರೀ ಹೆಚ್. ನಾಗಪ್ಪ:- ಮುನಿಸಿಪಾಲಿಟಿ ನಾವು ಯಾವುದೇ ಪತ್ರ ಬರೆದಿಲ್ಲ. ಸರ್ಕಾರ ಪತ್ರ ಬರೆದಾಗ ಜಾಗ ಯಾವುದೂ ಇಲ್ಲ ಎಂದು ಹೇಳಿದ್ದಾರೆ. ತಾವು ಜಾಗವನ್ನು ಕೊಡಿಸುವುದಾದರೆ ಆದಷ್ಟು ಬೇಗನೆ ಪ್ರಾರಂಭ ಮಾಡುತ್ತೇವೆ.

ಶ್ರೀ ಹೆಚ್.ಪಿ. ಬಾಲಕೃಷ್ಣ:- ಜಾಗವನ್ನು ಕೊಡಿಸುತ್ತೇವೆ. ಕೊಟ್ಟ ತಕ್ಷಣ ಪ್ರಾರಂಭ ಮಾಡುತ್ತೀರಾ?

ಶ್ರೀ ಹೆಚ್. ನಾಗಪ್ಪ:- ಹೌದು, ಮಾಡುತ್ತೇವೆ.

ಶಿವಮೊಗ್ಗ ತಾಲ್ಲೂಕಿನಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯಿಂದ ಮನೆಗಳ ಹಂಚಿಕೆ

51(212) ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯಿಂದ ನಿರ್ಮಾಣವಾಗಿ ಹಂಚಿಕೆಯಾಗದೇ ಉಳಿದಿರುವ ಮನೆಗಳೆಷ್ಟು; ಹಾಗೂ ವಿತರಣೆ ಮಾಡದಿರಲು ಕಾರಣಗಳೇನು?

ಆ) ಶಿವಮೊಗ್ಗ ತಾಲ್ಲೂಕಿನಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯಿಂದ ನಿರ್ಮಾಣವಾದ ಮನೆಗಳೆಷ್ಟು; ಅವುಗಳು ಹಂಚಿಕೆಯಾಗದಿರಲು ಕಾರಣವೇನು; ಅವುಗಳನ್ನು ಯಾವಾಗ ಹಂಚಿಕೆ ಮಾಡಲಾಗುವುದು?

ಅ) ರಾಜ್ಯದಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯ ವತಿಯಿಂದ ಫೆಬ್ರವರಿ 98 ರವರೆಗೆ 19827 ಮನೆಗಳನ್ನು ನಿರ್ಮಿಸಲಾಗಿದ್ದು, 13144 ಮನೆಗಳನ್ನು ಈಗಾಗಲೇ ಅರ್ಹ ಫಲಾನುಭವಿಗಳಿಗೆ ಹಂಚಲಾಗಿರುತ್ತದೆ. ಉಳಿದ 6683 ಮನೆಗಳ ಪೈಕಿ 3620 ಮನೆಗಳಿಗೆ ವಿದ್ಯುಚ್ಛಕ್ತಿ, ಒಳಚರಂಡಿ ಮತ್ತಿತರ ಸಣ್ಣಪುಟ್ಟ ಕೆಲಸಗಳು ಆಗಬೇಕಾಗಿದ್ದು, ಈ ಕೆಲಸಗಳನ್ನು ಈಗಾಗಲೇ ಮಾಡಲಾಗುತ್ತಿದೆ. ಈ ಕೆಲಸಗಳು ಮುಗಿದ ನಂತರ ಹಂಚಿಕೆಯ ಕ್ರಮ ಕೈಗೊಳ್ಳಲಾಗುವುದು. ಇನ್ನುಳಿದ 3063 ಮನೆಗಳನ್ನು ಹಂಚಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು)

ಅ) ಶಿವಮೊಗ್ಗ ನಗರದಲ್ಲಿ ಮಂಡಳಿ ವತಿಯಿಂದ 143 ಮನೆಗಳನ್ನು ಈ ಕೆಳಕಂಡ ಕೊಳಚೆ ಪ್ರದೇಶಗಳಲ್ಲಿ ನಿರ್ಮಿಸಲಾಗಿದೆ.

1.	ಊರ್ಗದೂರಿನಲ್ಲಿ	-	58
2.	ನಾಗೇಂದ್ರ ಕಾಲೋನಿಯಲ್ಲಿ	-	37
3.	ಕಲ್ಲಹಳ್ಳಿಯಲ್ಲಿ	-	48

ಈ ಪೈಕಿ ಊರ್ಗದೂರಿನ 58 ಮನೆಗಳು ಹಾಗೂ ನಾಗೇಂದ್ರ ಕಾಲೋನಿ ಕೊಳಚೆ ಪ್ರದೇಶದ 37 ಮನೆಗಳನ್ನು ಈಗಾಗಲೇ ನೈಜ ಫಲಾನುಭವಿಗಳಿಗೆ ವಿತರಿಸಲಾಗಿರುತ್ತದೆ. ಕಲ್ಲಹಳ್ಳಿಯ 48 ಮನೆಗಳ ಪೈಕಿ 1 ಮನೆಯನ್ನು ಈಗಾಗಲೇ ಹಂಚಿಕೆ ಮಾಡಲಾಗಿದ್ದು, ಉಳಿದ 47 ಮನೆಗಳನ್ನು ಹಂಚಿಕೆ ಮಾಡಲು ಮಂಡಳಿಯು ದಿನಾಂಕ:21-10-97 ರ ಸಭೆಯಲ್ಲಿ ನಿರ್ಣಯ ಮಾಡಿದ್ದು ಮನೆಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗಿದೆ.